# ನೇಯ್ಗೆ ಕಾಯಕದ ಶರಣ ಮತ್ತು ಶರಣೆಯರ ವಚನಗಳ ಮಹತ್ವ

**ಮೋಹನ್ ಕುಮಾರ್ ಆರ್.**

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.15580976

## ABSTRACT:

ಆದ್ಯವಚನಕಾರರಾದ ಜೇಡರ ದಾಸಿಮಯ್ಯನವರು ನೇಯ್ಗೆ ಕಾಯಕವನ್ನು ಮಾಡುತ್ತಿದ್ದ ಶ್ರೇಷ್ಠ ಶಿವಶರಣ ಹಾಗೆಯೇ ದೊರೆತಿರುವ ಆಧಾರಗಳ ಮೇರೆಗೆ ದಾಸಿಮಯ್ಯನ ಪತ್ನಿ ದುಗ್ಗಳೆ, ಅಮುಗಿ ದೇವಯ್ಯ, ಅಮುಗೆ ರಾಯಮ್ಮ, ಆದಯ್ಯ, ಕದಿರ ರೆಮ್ಮವ್ವೆ, ಕದಿರ ಕಾಯಕದ ಕಾಳವ್ವೆಯರು ಕೂಡ ನೇಯ್ಗೆ ಕಾಯಕವನ್ನು ಮಾಡುತ್ತ ಸಮಾಜಕ್ಕೆ ತಮ್ಮದೇ ಆದ ವಚನಗಳ ಮೂಲಕ ಸಮಾಜದ ಸರ್ವೋನ್ನತಿಗೆ ಶ್ರಮಿಸಿದ ಕಾಯಕ ಶರಣ ಮತ್ತು ಶರಣೆಯರು. ನೇಯ್ಗೆ ಕಾಯಕವನ್ನು ಮಾಡುತ್ತಿದ್ದ ಈ ಶರಣ ಮತ್ತು ಶರಣೆಯರು ತಮ್ಮ ಅನುಭವ, ಆತ್ಮಾನುಭೂತಿಯನ್ನು ಸಮಾಜದ ಜನರೊಂದಿಗೆ ಹಂಚಿಕೊಳ್ಳಲು ಪ್ರಯತ್ನಿಸಿದರು. ಸರಳ ಮತ್ತು ಸ್ಪಷ್ಟ ನುಡಿಗಳಲ್ಲಿ ವಚನಗಳನ್ನು ಕಟ್ಟಿಕೊಟ್ಟು ದಾಂಪತ್ಯದಿಂದಲೂ ಮೋಕ್ಷ ಸಂಪಾದನೆ ಸಾಧ್ಯವೆಂಬ ಅಧ್ಯಾತ್ಮಿಕ ಚಿಂತನೆಯನ್ನು ತೋರಿದವರು. ಸತ್ಯದ ಪ್ರತಿಪಾದನೆ, ಸ್ತ್ರೀಪರ ಕಾಳಜಿ, ಸ್ತ್ರೀಸಮಾನತೆ, ವೈಶಾಲ್ಯ ಮನೋಭಾವ, ವಿಶ್ವಮಾನವತ್ವದ ಭಾವನೆ, ಸಂಕುಚಿತತೆಯ ವಿರೋಧ, ಆಡಂಬರ ಮೌಢ್ಯ ಚಿಂತನೆಗಳ ಖಂಡನೆ, ಡಾಂಭಿಕ ಭಕ್ತಿಯ ವಿಡಂಬನೆ, ಅಧ್ಯಾತ್ಮಿಕ ಚಿಂತನೆ, ಅಧ್ಯಾತ್ಮಿಕ ನಿಷ್ಠೆ, ಏಕದೇವೋಪಾಸನೆಯ ನಿಷ್ಠೆ, ನೈಜಭಕ್ತಿ ಪ್ರತಿಪಾದನೆ, ಪುರೋಹಿತಶಾಹಿಯ ನಿರಾಕರಣೆ, ದೃಢ ಭಕ್ತಿ, ಸತ್ಸಂಗಕ್ಕೆ ಆದ್ಯತೆ, ಜಾತಿ ಮತ್ತು ಅಸ್ಪೃಶ್ಯತೆಯ ನಿರಾಕರಣೆ ಮುಂತಾದ ಶ್ರೇಷ್ಠ ಚಿಂತನೆಗಳನ್ನು ಈ ನೇಯ್ಗೆ ಕಾಯಕದ ಶರಣರಲ್ಲಿ ಕಾಣಲು ಸಾಧ್ಯ.

## KEYWORDS:

ಜಾತ್ಯಾತೀತತೆ, ಡಾಂಭಿಕ ಭಕ್ತಿಗೆ ವಿರೋಧ, ಸತ್ಸಂಗಕ್ಕೆ ಆದ್ಯತೆ, ಅಧ್ಯಾತ್ಮಿಕ ಚಿಂತನೆ, ನೈಜಭಕ್ತಿ.

**ಪೀಠಿಕೆ:**

ಕನ್ನಡ ಸಾಹಿತ್ಯ ಲೋಕದಲ್ಲಿ ಕಂಡುಬರುವ ಅನನ್ಯ ಸಾಹಿತ್ಯ ಪ್ರಕಾರವೆಂದರೆ ವಚನ ಸಾಹಿತ್ಯ. ತಮ್ಮ ಮನದಾಳದ ಚಿಂತನೆಗಳ ಅಭಿವ್ಯಕ್ತಿಗೆ ಜನರು ದಿನನಿತ್ಯ ಬಳಸುತ್ತಿದ್ದ ಭಾಷೆಯನ್ನೇ ವಚನ ರಚನೆಗೆ ಬಳಸಿಕೊಂಡವರು 12ನೇ ಶತಮಾನದ ವಚನಕಾರರು. ಸಮಾಜದಲ್ಲಿದ್ದ ಎಲ್ಲಾ ವೃತ್ತಿಗಳನ್ನು ಶ್ರೇಷ್ಠವೆಂದೇ ಭಾವಿಸಿದ್ದರು. ಜ್ಞಾನ, ಕ್ರಿಯೆಗಳ ಸಂಬಂಧದ ಸಮನ್ವಯದ ಬಗ್ಗೆ ತಿಳಿಸಿದ ವಚನಕಾರರು 'ಅರಿವೇ

ಗುರುವು'ಎಂಬುದನ್ನು ಅರಿತಿದ್ದವರು. "ಕಾಯಕ ಎಂಬ ಪರಿಕಲ್ಪನೆ ಶರಣರು ಧಾರ್ಮಿಕ ಪ್ರಪಂಚಕ್ಕೆ ಕೊಟ್ಟ ನಿತ್ಯ ನೂತನ ಕೊಡುಗೆ"[1] ಕಾಯಕದಿಂದ ಜೀವನ್ಮುಕ್ತಿ ಎಂದು ನಂಬಿದ್ದ ವಚನಕಾರರು ವೃತ್ತಿ ಪಾವಿತ್ರ್ಯತೆಯನ್ನು ಕಾಯ್ದುಕೊಂಡಿದ್ದರು. ಶರಣರೆಲ್ಲ ಒಂದೇ ಕುಲವೆಂದು ಭಾವಿಸಿದ್ದರು. "ದುಡಿಮೆ ವ್ಯಕ್ತಿಜೀವನದ ಕಡ್ಡಾಯ ಅಂಗವಾಗಬೇಕೆಂದು ಶರಣರು ಸಾರಿದರು. ದೇಹಶ್ರಮದ ಮಹತ್ವವನ್ನು ಅರುಹಿದರು. 'ಕಾಯಕವೇ ಕೈಲಾಸ'ವೆಂದು ಅರ್ಥಶಾಸ್ತ್ರ ಅಧ್ಯಾತ್ಮಗಳನ್ನು ಹದವಾಗಿ ಬೆಸೆದರು."[2] ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಿದ ಶರಣರು ಸ್ತ್ರೀಯರು ಮೋಕ್ಷಕ್ಕೆ ಹಕ್ಕುದಾರರು ಎಂಬುದನ್ನು ಮುಕ್ತವಾಗಿ ಪ್ರಚುರಪಡಿಸಿದರು.

**ನೇಯ್ಗೆ ಕಾಯಕದ ಶರಣ ಮತ್ತು ಶರಣೆಯರ ವಚನಗಳ ಮಹತ್ವ:**

ಆರೋಗ್ಯಪೂರ್ಣ ಸಮಾಜದ ಸೃಷ್ಟಿಗಾಗಿ ಸಮಾಜದ ಜನರ ಉನ್ನತಿಗಾಗಿ ತಮ್ಮ ಕಾಯಕದ ಮೂಲಕ ಕೊಡುಗೆಯನ್ನು ನೀಡುತ್ತಿದ್ದ ಹಲವು ಸಮುದಾಯಗಳಲ್ಲಿ ಕುಶಲಕರ್ಮಿ ಸಮುದಾಯಗಳೂ ಸೇರಿವೆ. ಅಂತಹ ಕುಶಲಕರ್ಮಿಗಳಲ್ಲಿ ಬಹಳ ನಿಷ್ಠೆ, ಪ್ರಾಮಾಣಿಕತೆಯಿಂದ ಅನುಸರಿಸುತ್ತಿದ್ದ ನೇಯ್ಗೆ ಕಾಯಕದ ಶರಣರು ಪ್ರಸಿದ್ಧರು. "ನೇಕಾರಿಕಾ ವೃತ್ತಿ ಕುಶಲಕರ್ಮಿಗಳಿಗೆ ಸೇರಿದ್ದಾಗಿರುವುದರಿಂದ ಅದರಲ್ಲಿ ಸಹಜವಾಗಿಯೇ ಬುದ್ಧಿವಂತರಾಗಿರುವುದನ್ನು ನೋಡುತ್ತೇವೆ. ಉತ್ತರ ಪ್ರದೇಶದ ಮಹಾತ್ಮ ಕಬೀರ, ತಮಿಳುನಾಡಿನ ತಿರುವಳ್ಳುವರ್ ಇವರೂ ಸಹಿತ ನೇಕಾರಿಕಾ ವೃತ್ತಿಯವರಾಗಿ ಮಹತ್ವದ ಅಧ್ಯಾತ್ಮಿಕ ಸಾಹಿತ್ಯ ರಚಿಸಿರುವುದನ್ನು ಕಾಣುತ್ತೇವೆ."[3]

ದಾಂಪತ್ಯವನ್ನು ನೇಯ್ಗೆ ಕಾಯಕದ ಶರಣರು ಪುರಸ್ಕರಿಸಿದವರೇ ಹೊರತು ತಿರಸ್ಕರಿಸಿದವರಲ್ಲ. ದಾಂಪತ್ಯದಿಂದಲೂ ಮೋಕ್ಷ ಸಂಪಾದನೆ ಸಾಧ್ಯ ಎಂದು ಪ್ರತಿಪಾದಿಸಿದ ವಚನಕಾರರಲ್ಲಿ ದಾಸಿಮಯ್ಯನೇ ಮೊದಲಿಗ, ಇದಕ್ಕೆ ಆತನ ವಚನವೇ ಸಾಕ್ಷಿ.

**"ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಸತಿಪತಿಗಳೊಂದಾಗದವನ ಭಕ್ತಿ**
**ಅಮೃತದೊಳು ವಿಷ ಬೆರೆದಂತೆ ಕಾಣಾ! ರಾಮನಾಥ."[4]**

ಈ ವಚನ ದಾಸಿಮಯ್ಯನ ಜೀವನಾನುಭವವನ್ನು ವ್ಯಕ್ತಪಡಿಸುವುದರ ಜೊತೆಗೆ ದಾಂಪತ್ಯ ಜೀವನದ ಸಾರ್ಥಕತೆಯನ್ನು ಮನೋಜ್ಞವಾಗಿ ಚಿತ್ರಿಸುತ್ತದೆ. ಪರಮಾತ್ಮನ ಭಕ್ತಿಗೆ ಅರ್ಪಿಸಿಕೊಂಡ ತಮ್ಮ ದಾಂಪತ್ಯ ಜೀವನವು ಸಮಾಜಕ್ಕೆ ಮಾದರಿಯಾಗಿ ನಿಲ್ಲುವಲ್ಲಿ ಯಶಸ್ವಿಯಾಗಿರುತ್ತದೆ. ಗಂಡ ಹೆಂಡತಿಯ ನಡುವಿನ ಆತ್ಮೀಯತೆ, ನಂಬಿಕೆ, ಪರಸ್ಪರ ಗೌರವ ಸೂಚಿಸುವಿಕೆ, ಆದರ್ಶಪೂರ್ಣ ದಾಂಪತ್ಯವನ್ನು ತಿಳಿಸುವ ದಾಸಿಮಯ್ಯನ ಮತ್ತೊಂದು ವಚನ ಹೀಗಿದೆ.

**"ಬಂದುದನರಿದು ಬಳಸುವಳು**

**ಬಂದುದ ಪರಿಣಾಮಿಸುವಳು...**

**ದುಗ್ಗಳೆಯ ತಂದು ಬದುಕಿದೆನು ಕಾಣಾ ! ರಾಮನಾಥ.''[5]**

ಪರಸ್ಪರರನ್ನು ಗೌರವಿಸುವುದರಲ್ಲಿ ದಾಂಪತ್ಯ ಜೀವನದ ಯಶಸ್ಸು ಮತ್ತು ಸಾರ್ಥಕತೆ ಇದೆ ಎನ್ನುವುದು ದಾಸಿಮಯ್ಯನ ಈ ವಚನದಿಂದ ಅರಿಯಬಹುದು. ದಾಂಪತ್ಯದಲ್ಲಿ ಸಾಮರಸ್ಯವಿದ್ದು, ಸತಿಪತಿಗಳ ಜೀವನೋದ್ದೇಶ ಮತ್ತು ಗುರಿ ಒಂದೇ ಆಗಿರುವುದು ಮುಖ್ಯ. ಪತಿಯ ಮನಸ್ಸನ್ನರಿತ ಸತಿ, ಸತಿಯ ಮನಸ್ಸನ್ನರಿತ ಪತಿ ಇದ್ದಲ್ಲಿ ಸನ್ಯಾಸಿಯಾಗುವುದಕ್ಕಿಂತ ದಾಂಪತ್ಯವೇ ಶ್ರೇಷ್ಠ ಎಂಬುದು ದಾಸಿಮಯ್ಯನವರ ಅಭಿಪ್ರಾಯ.

ನೇಯ್ಗೆ ಕಾಯಕದ ಸ್ವರೂಪ, ಅದರ ಮಹತ್ವವನ್ನು ವಿವರಿಸುತ್ತಲೇ ಅಧ್ಯಾತ್ಮಿಕ ಚಿಂತನೆಯನ್ನು ಅಭಿವ್ಯಕ್ತಿಸಲು ದಾಸಿಮಯ್ಯನವರು ವಚನವನ್ನು ರಚಿಸಿದ್ದಾರೆ.

**''ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ ಸಮಗಾಲನಿಕ್ಕಿ ಅಣಿಯೇಳ ಮುಟ್ಟದೆ ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು... ರಾಮನಾಥ''[6]**

ತಮ್ಮ ಸಮಕಾಲಿನ ಸಮಾಜದಲ್ಲಿ ನೇಕಾರಿಕೆಯಲ್ಲಿ ಬಳಸುತ್ತಿದ್ದ ಉಪಕರಣಗಳನ್ನು ಹೆಸರಿಸುತ್ತ ಬಟ್ಟೆಯನ್ನು ಹೆಣೆಯುವ ಪರಿಯನ್ನು ವಿಶ್ಲೇಷಿಸುತ್ತಾ ತನ್ನ ಕಾಯಕದಲ್ಲಿ ಮೋಕ್ಷವನ್ನು ಹೊಂದುವ ರೀತಿಯನ್ನು ಚಿತ್ರಿಸಿದ್ದಾರೆ. ದಾಂಪತ್ಯ ಜೀವನದಲ್ಲಿ ಎದುರಾಗುವ ಕಷ್ಟಗಳನ್ನು ಸಹಿಸುತ್ತಾ ಪರಮಾತ್ಮನಲ್ಲಿ ಭಕ್ತಿಯನ್ನಿಟ್ಟು ಸದಾಚಾರ ಸನ್ನಡತೆಗಳಿಂದ ಜೀವನವನ್ನು ಸಾಗಿಸಿದರೆ ಪರಮಾತ್ಮನು ಒಲಿಯುತ್ತಾನೆ. ಆ ವ್ಯಕ್ತಿ ಮೋಕ್ಷಕ್ಕೆ ಅರ್ಹನಾಗುತ್ತಾನೆ. ತನ್ನ ಜೀವನಕ್ಕೆ ಒಡೆಯನಾದವನು ತಾನೇ ವಿನಃ ಬೇರೆ ಯಾರನ್ನೂ ದೂರುವುದು ಸರಿಯಲ್ಲವೆಂಬ ಭಾವ ಈ ವಚನದಲ್ಲಿ ವ್ಯಕ್ತವಾಗುತ್ತದೆ.

ಇದೇ ರೀತಿ ನೇಯ್ಗೆ ಕಾಯಕದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದ ಶರಣೆ ಕದಿರ ರೆಮ್ಮವ್ವೆಯು ತನ್ನ ವೃತ್ತಿ ಸಂಬಂಧಿತವಾದ ವಚನವನ್ನು ರಚಿಸಿದ್ದಾಳೆ.

**''ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ :**
**ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು ನಿಂದಬೊಂಬೆ ಮಹಾರುದ್ರ;...**
**ಇನ್ನೇವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ?''[7]**

ಜಾತಿಯನ್ನು ನಿರಾಕರಿಸುವ ದಿಟ್ಟತನ, ತನ್ನ ಕಾಯಕದಲ್ಲಿ ದೇವರನ್ನು ಆರಾಧಿಸುವ ಅಧ್ಯಾತ್ಮಿಕ ಚಿಂತನೆ, ಕಾಯಕನಿಷ್ಠೆ ಅದರ ಮೂಲಕ ಜೀವನವನ್ನು ಸಾರ್ಥಕ ಗೊಳಿಸಿಕೊಳ್ಳುವ ಗುರಿ ಇವು ಕಾಯಕದ ಮೂಲಕ ಪರಿಶುದ್ಧ ಜೀವನದ ಸಾರ್ಥಕತೆಯನ್ನು ತೋರ್ಪಡಿಸುವ ರೀತಿಯಾಗಿದೆ. ತನ್ನ ಕದಿರ ಕಾಯಕದಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರನ್ನು ಅಂತರ್ಗತಗೊಳಿಸಿಕೊಂಡು ನಿದರ್ಶನದ ಮೂಲಕ ಕಾಯಕದ ಶ್ರೇಷ್ಠತೆಯನ್ನು ವ್ಯಕ್ತಪಡಿಸುವ ರೀತಿ ವಿಶಿಷ್ಟವಾಗಿದೆ.

ಡಾಂಭಿಕ ಭಕ್ತಿಯನ್ನು ವಿಡಂಭಿಸುವ ಹಲವಾರು ವಚನಗಳನ್ನು ನೇಯ್ಗೆ ಕಾಯಕದ ಶರಣರು ರಚಿಸಿರುವುದನ್ನು ಕಾಣಬಹುದು. ಸೌರಾಷ್ಟ್ರದಿಂದ ಪುಲಿಗೆರೆಗೆ ಬಂದು ನೆಲೆಸಿದ ನೇಯ್ಗೆ ಕಾಯಕದ ಆದಯ್ಯ ಮಹಾನ್ ಶಿವ ಭಕ್ತ. ಜೈನ ಧರ್ಮದ ಪದ್ಮಾವತಿಯನ್ನು ಪ್ರೇಮಿಸಿ ಮದುವೆಯಾದ ಈತ ತನ್ನ ಮಾವನಾದ ಪಾರಿಜಾ ಶೆಟ್ಟಿಯ ಜೊತೆ ವಾದಮಾಡಿಕೊಂಡು ಛಲದಿಂದ ಸೌರಾಷ್ಟ್ರದಿಂದ ಪುಲಿಗೆರೆಗೆ ಸೋಮೇಶ್ವರನ ತಂದು ಪ್ರತಿಷ್ಠಾಪಿಸಿದವನು.

ವೀರಶೈವ ಮತಪ್ರಚಾರಕ್ಕಾಗಿ ಪ್ರಾಣವನ್ನು ಬೇಕಾದರೂ ನೀಡಲು ಮುಂದಾದವನು. ಈತನ ವಚನಗಳಲ್ಲಿ ಸಾಹಿತ್ಯದ ಗುಣದ ಜೊತೆಗೆ ತಾತ್ವಿಕ ಪ್ರೌಢಿಮೆಯನ್ನು ಕಾಣಲು ಸಾಧ್ಯ.

**''ಜಪತಪ ನೇಮವಲ್ಲ, ಮಂತ್ರತಂತ್ರ ನೇಮವಲ್ಲ, ಧೂಪದೀಪಾರತಿ ನೇಮವಲ್ಲ...,**
**ಸೌರಾಷ್ಟ್ರ ಸೋಮೇಶ್ವರಲಿಂಗವಲ್ಲಿದ್ದ ಕಾರಣ ನಿತ್ಯನೇಮ''[8]**

ಶೈವ ಮತಾನುಯಾಯಿಯಾದ ಆದಯ್ಯ ತನ್ನ ಈ ವಚನದಲ್ಲಿ ಶಿವನನ್ನು ಮಾತ್ರ ದೃಢ ಭಕ್ತಿಯಿಂದ ಆರಾಧಿಸುವುದೇ ಮುಖ್ಯವೆಂದು ಸಾರಿದ್ದಾನೆ. ಆರಾಧನೆಯಲ್ಲಿ ಡಾಂಭಿಕ ಭಕ್ತಿ ಇರಬಾರದೆಂಬುದನ್ನು ಸ್ಪಷ್ಟಪಡಿಸಿದ್ದಾನೆ. ಬಹಿರಂಗದಲ್ಲಿ ಜಪ ತಪ ಮಂತ್ರ ತಂತ್ರ ಧೂಪ ದೀಪಾರತಿಗಳ ನೇಮ ಮಾಡುತ್ತಾ ಅಂತರಂಗದಲ್ಲಿ ಪರಧನ, ಪರಸ್ತ್ರೀ ಪರದೈವಗಳನ್ನು ನೆನೆವುದು ಶುದ್ಧ ಭಕ್ತಿಯಲ್ಲ ಎಂದು ವಿಡಂಭಿಸಿದ್ದಾನೆ.

ಅಧ್ಯಾತ್ಮ ಮತ್ತು ಅನುಭವಗಳ ಮಹತ್ವದ ಚಿಂತನೆಗಳನ್ನು ಸಮಾಜಕ್ಕೆ ನೀಡಿದ ಅಮುಗೆ ರಾಯಮ್ಮ ಹಲವಾರು ವಚನಗಳನ್ನು ರಚಿಸಿದ್ದಾರೆ. ನಿಜವಾದ ಶಿವಶರಣರಿಗೆ ಸರ್ವಸಂಘಪರಿತ್ಯಾಗಿಗೆ ಆಡಂಬರದ ವೇಷಭೂಷಣಗಳ ಅಗತ್ಯವಿರುವುದಿಲ್ಲ. ಶ್ರೇಷ್ಠವಾದ ಶಿವಭಕ್ತಿಯನ್ನು ಮನದಲ್ಲಿ ಹೊಂದಿರುವ ಶರಣನು ಬೂಟಾಟಿಕೆಯ ಮಾತುಗಳನ್ನಾಡುತ್ತಾ ಜನರನ್ನು ವಂಚಿಸಿ ಅವರನ್ನು ಬೆರಗುಗೊಳಿಸುವವನಾಗಿರುವುದಿಲ್ಲ. ಆತನಿಗೆ ತಾನು ಶ್ರೇಷ್ಠ ಭಕ್ತನೆಂದು ಹೇಳಿಕೊಳ್ಳುವ ಅಗತ್ಯವಿರುವುದಿಲ್ಲ. ಶಿವಸಾನಿಧ್ಯದ ಶ್ರೇಷ್ಠತೆಯನ್ನು ಹೊಂದಿರುವವರಿಗೆ ಲೋಕದ ಡಂಭಾಚಾರಗಳು ಅನಗತ್ಯ ಎಂಬುದನ್ನು ರಾಯಮ್ಮ ಹೀಗೆ ಹೇಳಿದ್ದಾರೆ.

**''ಆಕಾಶಕ್ಕೆ ಹಾರುವಂಗೆ ದೋಟಿಯ ಕೋಲ ಹಂಗೇತಕಯ್ಯಾ?...**
**ಕಾವಿ ಕಾಷಾಂಬರವ ಹೊದ್ದು ತಿರುಗುವ ಕರ್ಮಿಗಳ ಹಂಗೇತಕಯ್ಯಾ?''[9]**

ಹೊನ್ನು ಹೆಣ್ಣು ಮಣ್ಣಿನ ಮೇಲಿನ ಆಸೆ ಆಕಾಂಕ್ಷೆಗಳನ್ನು ತೊರೆದಿದ್ದೇನೆ ಎಂದು ಬಹಿರಂಗದಲ್ಲಿ ಹೇಳಿಕೊಂಡು ತಿರುಗುವ ವಿರಕ್ತನ ವೇಷದ ಅವಿವೇಕಿಗಳು ನಿಜವಾದ ವಿರಕ್ತರ ಗುಣಗಳನ್ನು ಅರಿಯದೆ ಕೇವಲ ಓದಿ ತಿಳಿದಿದ್ದರೆ ಅದು ನಿಷ್ಪ್ರಯೋಜಕ, ಕೇವಲ ತಲೆ ಬೋಳಿಸಿಕೊಂಡು ಕಾವಿಯ ಬಟ್ಟೆಯನ್ನು

ಹೊದ್ದುಕೊಂಡು ತಿರುಗುವವರು ಹಗಲುವೇಷಧಾರಿಗಳೇ ಹೊರತು ನಿಜ ಭಕ್ತರಲ್ಲ. ನಿಜವಾದ ಶಿವಶರಣರ ಮಧ್ಯದಲ್ಲಿ ಅಂತಹವರನ್ನು ಕಂಡರೆ ತನಗೆ ನಾಚಿಕೆಯಾಗುವುದೆಂದು ಅಮುಗೆರಾಯಮ್ಮ ಈ ಎರಡು ವಚನಗಳಲ್ಲಿ ತಿಳಿಸಿದ್ದಾರೆ.

**"ಮಂಡೆಯ ಬೋಳಿಸಿಕೊಂಡು**
**ತುಂಡುಗಂಬಳಿಯ ಹೊದ್ದವರ ಕಂಡಡೆ ನಂಬಲಾರೆ ನಚ್ಚಲಾರೆ.**
**ಈ ವೇಷವ ನಾಚಿದೆ ಅಮುಗೇಶ್ವರಾ."[10]**

**"ಹೊನ್ನಬಿಟ್ಟಡೇನು, ಹೆಣ್ಣಬಿಟ್ಟಡೇನು, ಮಣ್ಣಬಿಟ್ಟಡೇನು,**
**ವಿರಕ್ತನಾಗಬಲ್ಲನೆ?... ಮೆಚ್ಚುವನೆ, ಅಮುಗೇಶ್ವರಲಿಂಗವು?"[11]**

ಡಾಂಭಿಕ ಭಕ್ತಿಯನ್ನು ವಿಡಂಭಿಸುವ ಹಲವಾರು ವಚನಗಳನ್ನು ಜೇಡರ ದಾಸಿಮಯ್ಯನಲ್ಲೂ ಕಾಣಬಹುದು.

**"ಎಡರಡಸಿದಲ್ಲಿ ಮೃಡ! ನಿಮ್ಮ ನೆನವರು.**
**ಎಡರಡಸಿದ ವಿಪತ್ತು ಕಡೆಯಾಗಲೊಡನೆ**
**ಮೃಡ! ನಿಮ್ಮನೆಡಹಿಯೂ ಕಾಣರು! ರಾಮನಾಥ."[12]**

ಬರುಸಠಗನ ಭಕ್ತಿಯನ್ನು ವಿಡಂಭಿಸುವ, ಮಠದೊಳಗಣ ಬೆಕ್ಕಿನಂತಹ ಡಾಂಭಿಕ ಭಕ್ತರ ಆಚಾರ ವಿಚಾರಗಳನ್ನು ವಿಡಂಭಿಸುತ್ತಾ ದಾಸಿಮಯ್ಯನು ಮುಂದಿನ ಹಲವಾರು ವಚನಕಾರರಿಗೆ ಅತ್ಯುತ್ತಮ ಚಿಂತನೆಗಳನ್ನು ಒದಗಿಸಿಕೊಟ್ಟವನು. ಹೀಗೆ ಡಾಂಭಿಕ ಭಕ್ತಿಯನ್ನು ವಿಡಂಭಿಸುವ ಹಲವಾರು ವಚನಗಳನ್ನು ನೇಯ್ಗೆ ಕಾಯಕದ ಶರಣರಲ್ಲಿ ಕಾಣಲು ಸಾಧ್ಯ.

ಮೇಲು-ಕೀಳೆಂಬ ಭಾವನೆಗಳನ್ನು ವಿರೋಧಿಸುವ, ಜಾತಿಯನ್ನು ನಿರಾಕರಿಸುವ ವಚನಗಳನ್ನು ನೇಯ್ಗೆ ಕಾಯಕದ ವಚನಕಾರರಲ್ಲಿ ಗುರುತಿಸಬಹುದು. ತನ್ನ ನೇಯ್ಗೆ ಕಾಯಕದಿಂದ ಜಂಗಮ ದಾಸೋಹ ನಡೆಸುತ್ತಿದ್ದ ಸೊಲ್ಲಾಪುರದ ನಿವಾಸಿಯಾಗಿದ್ದ ಅಮುಗಿ ದೇವಯ್ಯನು ಇಷ್ಟಲಿಂಗ ಪೂಜಕ ಮತ್ತು ಆರಾಧಕನಾಗಿದ್ದವನು. ತನ್ನ ದೈವಭಕ್ತಿಗೆ ಕಟಿಬದ್ಧನಾಗಿದ್ದ ಈತ ರಾಜ್ಯದ ಮೇಲಧಿಕಾರಿಯಾಗಿದ್ದ ಸಿದ್ದರಾಮಯ್ಯನನ್ನು ತಿರಸ್ಕರಿಸಿ ಊರಿಂದ ಆಚೆ ಹೋದವನು. ಕಲ್ಯಾಣದಲ್ಲಿ ನೆಲೆಸಿದ ನಂತರ ಅಲ್ಲಿನ ಶರಣರ ಸಮಾಗಮದಿಂದಾಗಿ ಹಲವಾರು ವಚನಗಳನ್ನು ರಚಿಸಿದವನು.

**"ಕಕ್ಕಯ್ಯನ ಪ್ರಸಾದವ ಕೊಂಡೆನ್ನ ಕುಲಸೂತಕ ಹೋಯಿತ್ತಯ್ಯಾ,**
**ಚೆನ್ನಯ್ಯನ ಪ್ರಸಾದವ ಕೊಂಡೆನ್ನ ಛಲಸೂತಕ ಹೋಯಿತ್ತಯ್ಯಾ...,**
**ಮಹಾಘನ ಸದ್ಗುರು ಸಿದ್ದ ಸೋಮನಾಥಲಿಂಗವೆ**
**ನಿಮ್ಮ ಧರ್ಮ, ನಿಮ್ಮ ಧರ್ಮ."[13]**

ಅಮುಗಿದೇವಯ್ಯ ಅಂದಿನ ಸಮಾಜದಲ್ಲಿ ಪ್ರಚಲಿತವಾಗಿದ್ದ ಮೇಲು ಕೀಳೆಂಬ

ವ್ಯವಸ್ಥೆಯನ್ನು, ಜಾತಿ ಎಂಬ ಪೆಡಂಭೂತವನ್ನು ಹೇಗೆ ಧಿಕ್ಕರಿಸಿ ನಡೆದನು ಎನ್ನುವುದಕ್ಕೆ ಈ ಮೇಲಿನ ವಚನ ಸಾಕ್ಷಿ. ಅನುಭವ ಮಂಟಪದಲ್ಲಿದ್ದ ಹಲವಾರು ಶರಣರು ತಳಸಮುದಾಯದವರೇ ಆಗಿದ್ದವರು. ಆದರೆ ಅಲ್ಲಿದ್ದ ಶರಣರಲ್ಲೆಲ್ಲ ಸಮಾನತಾಭಾವ, ಪರಸ್ಪರ ಗೌರವ, ಅಭಿಮಾನ ಇತ್ತು. ಈ ವಚನದಲ್ಲಿ ತನ್ನ ಸಮಕಾಲೀನರೆಲ್ಲರನ್ನು ನೆನೆಯುವ ಅಮುವಗಿ ದೇವಯ್ಯ ತನ್ನ ಅರಿವಿನ ವಿಸ್ತರಣೆಗೆ ಸಹಾಯಕವಾಗಬಹುದಾದ, ಎಲ್ಲಾ ಶರಣರಿಂದ ದೊರೆಯಬಹುದಾದ ಜ್ಞಾನವನ್ನೆಲ್ಲವನ್ನು ನಿರಹಂಕಾರ ಮನೋಭಾವದಿಂದ ಸ್ವೀಕರಿಸುವ ಮನಸ್ಥಿತಿ ಮುಖ್ಯ ಎಂಬುದನ್ನು ಮನಗಂಡಿರುವುದನ್ನು ಮನೋಜ್ಞವಾಗಿ ಚಿತ್ರಿಸಿದ್ದಾನೆ.

ಅಮಾನವೀಯ ಅಸ್ಪೃಶ್ಯತೆಯನ್ನು ವಿರೋಧಿಸುವಂತಹ ದಾಸಿಮಯ್ಯನ ಈ ವಚನ ಅತ್ಯುತ್ತಮವಾದುದು.

**''ಕೀಳು ಡೋಹರ ಕಕ್ಕ ; ಕೀಳು ಮಾದರ ಚೆನ್ನ.**
**ಕೀಳು ಓಹಿಲದೇವ; ಕೀಳು ಉದ್ಭಟಯ್ಯ.**
**ಕೀಳಿಂಗಲ್ಲದೆ ಹಯನು ಕರೆಯದು ಕಾಣಾ!**
**ರಾಮನಾಥ''**[14]

ಅಂದಿನ ಸಮಾಜದಲ್ಲಿ ಆಚರಣೆಯಲ್ಲಿದ್ದ ಅಸ್ಪೃಶ್ಯತೆಯನ್ನು ವಿರೋಧಿಸುವ ಸಲುವಾಗಿ ತಳಸಮುದಾಯದ ಪರ ನಿಂತು ಅವರನ್ನು ಎಲ್ಲ ರೀತಿಯಲ್ಲಿ ಬೆಂಬಲಿಸುತ್ತಾ ಸಮಾನತೆಗಾಗಿ ದುಡಿದ, ನೈಜ ಭಕ್ತಿಯ ಪ್ರತಿಪಾದನೆ ಮಾಡುತ್ತಾ ಬದುಕಿದ ಶರಣರನ್ನು ಕಾಣಲು ಸಾಧ್ಯ. ಆಕಳಿನಿಂದ ಹಾಲನ್ನು ಕರೆದುಕೊಳ್ಳಬೇಕೆಂದರೆ ಕೀಳಾಗಲೇಬೇಕು ಅಂದರೆ ನೆಲದ ಮೇಲೆ ಕುಳಿತು ಹಾಲನ್ನು ಹಿಂಡಿಕೊಳ್ಳಬೇಕು ಆಕಳಿನ ಕೆಚ್ಚಲಿಗೆ ಕೈ ಹಾಕಿದರೆ ಮಾತ್ರವೇ ಅಮೃತ ಸಮಾನವಾದ ಹಾಲನ್ನು ಪಡೆಯಲು ಸಾಧ್ಯ ಆ ಕೆಚ್ಚಲು ಕೆಳಗೆ ದೊರೆಯುವುದೇ ಹೊರತು ಬೆನ್ನಿನ ಮೇಲೆಯೂ ಅಥವಾ ಆಕಳಿನ ತಲೆಯ ಮೇಲೆಯೂ ಇರಲು ಸಾಧ್ಯವಿಲ್ಲ. ಅಹಂಕಾರವನ್ನು ತಲೆಗೇರಿಸಿಕೊಂಡಿರುವ ಜನರು ತಾವು ಅಮೃತದಂತಹ ಹಾಲನ್ನು ಪಡೆಯಬೇಕಾದರೆ ತಲೆಬಾಗಲೇಬೇಕು ನಿರಹಂಕಾರಿಗಳಾಗಲೇಬೇಕು ಆಗಲೇ ಅಮೃತವನ್ನು ಸವಿದು ಮೋಕ್ಷ ಪಡೆಯಲು ಸಾಧ್ಯ. ನಿರಹಂಕಾರಿಗಳಾದ ಡೋಹರ ಕಕ್ಕ, ಮಾದಾರ ಚೆನ್ನ, ಓಹಿಲದೇವ, ಉದ್ಭಟಯ್ಯನಂತಹವರೇ ನಿರಹಂಕಾರಿಗಳಾಗಿ ಮೋಕ್ಷ ಪಡೆಯುವವರು ಎಂದು ದಾಸಿಮಯ್ಯ ಹೇಳಿದ್ದಾರೆ.

ಅಧ್ಯಾತ್ಮಿಕ ಚಿಂತನೆ, ಆಧ್ಯಾತ್ಮಿಕ ನಿಷ್ಠೆ, ಏಕದೇವೋಪಾಸನೆಯನ್ನು ಕುರಿತ ಹಲವಾರು ವಚನಗಳನ್ನು ನೇಯ್ಗೆ ಕಾಯಕದ ವಚನಕಾರರಲ್ಲಿ ಕಾಣಲು ಸಾಧ್ಯ. ರಾಟೆಯಿಂದ ನೂಲು ತೆಗೆಯುವ ಕಾಯಕದಲ್ಲಿ ನಿರತಳಾಗಿದ್ದ ಕದಿರ ಕಾಯಕದ ಕಾಳವ್ವೆಯ ವಚನಗಳು ಎಷ್ಟು ಎಂಬುದು ತಿಳಿದಿಲ್ಲ. ಆದರೆ ಆಕೆಯ ಎರಡು ಸಾಲಿನ

ಒಂದೇ ವಚನ ದೊರೆತಿದೆ. ದೊರೆತಿರುವ ಈ ಒಂದೇ ವಚನವು ಆಕೆಗಿದ್ದ ಅಗಾಧ ಅಧ್ಯಾತ್ಮಿಕ ಚಿಂತನೆಯನ್ನು ವ್ಯಕ್ತಪಡಿಸಬಲ್ಲದು.

**"ಕದಿರು ಮುರಿಯೆ ಏನೂ ಇಲ್ಲ.**
**ವ್ರತಹೀನನ ನೆರೆಯಲಿಲ್ಲ, ಗುಮ್ಮೇಶ್ವರಾ."[15]**

ಕಾಯಕದಲ್ಲಿ ಬಟ್ಟೆಯನ್ನು ನೇಯಲು ಕದಿರು ಅತ್ಯಂತ ಮುಖ್ಯ ಪಾತ್ರ ವಹಿಸುವ ವಸ್ತುವಾಗಿದೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತೆ ಬಟ್ಟೆ ನೇಯಲು ಚಿಕ್ಕಗಾತ್ರದಲ್ಲಿರುವ ಕದಿರು ಅಗತ್ಯವಾಗಿ ಬೇಕು, ಅದಿಲ್ಲದಿದ್ದರೆ ಬಟ್ಟೆ ನೇಯಲು ಸಾಧ್ಯವಾಗುವುದಿಲ್ಲ. ನೇಯ್ಗೆ ಕಾಯಕದಲ್ಲಿ ಕದಿರಿನ ಪಾತ್ರ ವ್ರತದಂತೆ. ಅದು ಮುರಿದು ಹೋದರೆ ಬಟ್ಟೆ ನೇಯುವ ಕಾರ್ಯ ನಿಲ್ಲುತ್ತದೆ. ಸನ್ಮಾರ್ಗದಲ್ಲಿ ಜೀವನ ನಡೆಸುವ ಸದ್ಭಕ್ತನಲ್ಲಿ ವ್ರತಾಚರಣೆಗಳು ಅತಿ ಮುಖ್ಯ. ಅಂತಹ ವ್ಯಕ್ತಿಯ ಜೊತೆಗಿನ ಸಂಬಂಧ ಸೂಕ್ತವಾದದ್ದು. ಆತ್ಮ ಸಂಗಾತಿಯಾಗುವವನು ಹಾಗೆಯೇ ವ್ರತಾಚಾರಿಯಾಗಿರಬೇಕು. ಸನ್ನಡತೆ, ಸಚ್ಚಾರಿತ್ರ್ಯ, ಸದ್ಭಕ್ತಿಗಳೆಂಬ ಸನ್ಮಾರ್ಗಗಳ ಮೂಲಕ ವ್ಯಕ್ತಿಯು ಮೋಕ್ಷ ಪಡೆಯಲು ಸಾಧ್ಯ. ವ್ರತಹೀನನಾಗಿ ಬದುಕು ಸಾಗಿಸುವುದು ಸರಿಯಲ್ಲ. ಅವನು ಶಿವನನ್ನು ತಲುಪಲು ಸಾಧ್ಯವಿಲ್ಲ ಎಂಬುದು ಈಕೆಯ ಅಭಿಪ್ರಾಯ. "ಕದಿರು ಮುರಿಯಲು ಹೇಗೆ ಕಾರ್ಯ ನಿಲ್ಲುವುದೋ ಹಾಗೆ ವ್ರತಹೀನನನ್ನು ಕೂಡಿದರೆ ಜೀವನ ವ್ಯರ್ಥ ಎಂಬ ಆಶಯ ಇಲ್ಲಿದೆ. ವ್ರತ ನಿಷ್ಠೆಯೇ ಇವಳ ಜೀವನದ ಪ್ರಮುಖ ಮೌಲ್ಯವಾಗಿದೆ."[16]

ನೇಯ್ಗೆ ಕಾಯಕ ಶರಣನಾದ ಅಮುಗಿ ದೇವಯ್ಯನಲ್ಲೂ ಈ ಬಗೆಯ ಆಧ್ಯಾತ್ಮಿಕ ಚಿಂತನೆಯನ್ನು ಕಾಣಬಹುದು.

**"ಹುಡಿ ಹತ್ತದ ಗಾಳಿಯಂತೆ,**
**ಕಾಡಿಗೆ ಹತ್ತಿದಾಲಿಯಂತೆ...,**
**ನಿಮ್ಮ ಶರಣನು ಸಕಲಸುಖಂಗಳ ಸುಖಿಸಿಯೂ ಬೇರಿಪ್ಪನು."[17]**

ಶಿವಶರಣನು ತನ್ನ ಮನಸ್ಸನ್ನು ಶಿವಭಕ್ತಿಯಲ್ಲಿ ಲೀನವಾಗಿಸಿಕೊಂಡಾಗ ಆ ಭಕ್ತಿ ಭಾವದಲ್ಲಿಯೇ ಎಲ್ಲ ಬಗೆಯ ಸುಖಗಳನ್ನು ಅನುಭವಿಸುತ್ತಿರುತ್ತಾನೆ. ದೈಹಿಕ ಸುಖಗಳಿಗಿಂತ ಮಾನಸಿಕವಾಗಿ ಎಲ್ಲ ಬಗೆಯ ಸುಖಗಳನ್ನು ಅನುಭವಿಸಲು ಹಾಗೂ ಸರ್ವಶ್ರೇಷ್ಠವಾದ ಸುಖವನ್ನು ಅನುಭವಿಸುವುದು ಭಕ್ತಿಯ ಔನ್ನತ್ಯದಲ್ಲಿ ಮಾತ್ರವೆಂಬುದು ಅಮುಗಿ ದೇವಯ್ಯನ ಇಂಗಿತ.

ಸೌರಾಷ್ಟ್ರ ಸೋಮೇಶ್ವರ ಎಂಬ ವಚನಾಂಕಿತವನ್ನು ಹೊಂದಿರುವ ಪುಲಿಗೆರೆಯ ಆದಯ್ಯನಲ್ಲೂ ಈ ಬಗೆಯ ಅಧ್ಯಾತ್ಮಿಕ ಚಿಂತನೆಗಳು ಅಧ್ಯಾತ್ಮಿಕ ನಿಷ್ಠೆ ಏಕದೇವೋಪಾಸನೆಯನ್ನು ಕುರಿತ ವಚನಗಳಿವೆ.

**"ಅಂಗದಲ್ಲಿ ಲಿಂಗವಿರಲು ಎನ್ನ ತನು ನಿರ್ಮಲವಾಯಿತ್ತು...,**
**ಸೌರಾಷ್ಟ್ರ ಸೋಮೇಶ್ವರನ, ಶರಣರ ಸಂಗದಿಂದ ಶಿವಪ್ರಸಾದ ದೊರೆಕೊಂಡಿತ್ತಾಗಿ**
**ಸರ್ವಾಂಗಲಿಂಗವಾಯಿತ್ತು."[18]**

ಶಿವನಲ್ಲಿ ಮನಸ್ಸು ತಲ್ಲೀನವಾಗಿ ಶಿವಶರಣರ ಸಂಘದಲ್ಲಿದ್ದರೆ ಸತ್ಸಂಗಕ್ಕೆ ಆದ್ಯತೆ ನೀಡಿದರೆ ತನು ಮನ ಪ್ರಾಣ ಪಂಚೇಂದ್ರಿಯಗಳು ಹೇಗೆ ನಿರ್ಮಲವಾಗಿಸಿಕೊಂಡು ಶಿವಸಾಕ್ಷಾತ್ಕಾರವನ್ನು ಪಡೆಯಲು ಸಾಧ್ಯವೆಂಬುದನ್ನು ಶರಣ ಆದಯ್ಯ ತಿಳಿಸಿದ್ದಾನೆ. ಸರ್ವಾಂಗವು ಶಿವನಿಂದ ಶಿವಶರಣರಿಂದ ಆವರಿಸಲ್ಪಟ್ಟಾಗ ಸರ್ವಾಂಗವು ಲಿಂಗವಾಗಿ ಸರ್ವಜನರಿಂದ ಪೂಜ್ಯಯೋಗ್ಯರಾಗಿ ಸರ್ವಸಿದ್ಧಿಗೆ ದಾರಿಯಾಗುತ್ತದೆ ಎಂಬುದು ಈ ವಚನದ ಆಶಯ.

ನೈಜ ಭಕ್ತಿ ಪ್ರತಿಪಾದನೆ, ದೃಢಭಕ್ತಿಯ ಪರಿ, ಗುರು ಭಕ್ತಿಯ ಶ್ರೇಷ್ಠತೆ, ಸಮಾನತೆ, ಸತ್ಯದ ಪ್ರತಿಪಾದನೆಯ ಅಂಶಗಳನ್ನು ವ್ಯಕ್ತಪಡಿಸುವ ವಚನಗಳು ಈ ನೇಯ್ಗೆ ಕಾಯಕದ ವಚನಕಾರರಿಂದ ರಚಿಸಲ್ಪಟ್ಟಿವೆ. ನೇಯ್ಗೆ ಕಾಯಕದಲ್ಲಿ ಪತಿಯ ಜೊತೆಯಲ್ಲಿ ತಾನೂ ಭಾಗಿಯಾಗಿ ಪತಿಯ ಕಾಯಕನಿಷ್ಠೆ, ಪ್ರಾಮಾಣಿಕತೆ, ಭಕ್ತಿ ಎಲ್ಲದರಲ್ಲೂ ಸಹಧರ್ಮಿಣಿಯಾಗಿ ಪತಿಯ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ದಾಸಿಮಯ್ಯನ ಆತ್ಮಸಂಗಾತಿ ದುಗ್ಗಳೆಯು ಹಲವಾರು ವಚನಗಳನ್ನು ರಚಿಸಿರಬಹುದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಆಕೆಯ ಹೆಸರಿನಲ್ಲಿ ಎರಡೇ ವಚನಗಳು ದೊರೆತಿರುವುದು ದುರದೃಷ್ಟವೇ ಸರಿ. ಶ್ರೇಷ್ಠ ಭಕ್ತ ಮತ್ತು ಶ್ರೇಷ್ಠ ಭಕ್ತಿಯ ಪರಿಯನ್ನು ಕುರಿತು ಆಕೆಯ ಈ ವಚನ ತಿಳಿಸುತ್ತದೆ

**"ಭಕ್ತನಾದಡೆ ಬಸವಣ್ಣನಂತಾಗಬೇಕು.**
**ಜಂಗಮವಾದಡೆ ಪ್ರಭುದೇವರಂತಾಗಬೇಕು...**
**ತತ್ವದ ಮಾತು ಎನಗೇಕಯ್ಯಾ ದಾಸಯ್ಯಪ್ರಿಯ ರಾಮನಾಥಾ?"[19]**

ಶ್ರೇಷ್ಠ ಭಕ್ತನಾದ ಶಿವಶರಣನು ತನಗಿಂತ ಹಿರಿಯನಾದರೂ ತನಗಿಂತ ಕಿರಿಯನಾದರೂ ಆತನನ್ನು ಅನುಕರಿಸುವುದರಲ್ಲಿ ಅನುಸರಿಸುವುದರಲ್ಲಿ ಯಾವುದೇ ಮುಜುಗರ ಪಡುವ ಅಗತ್ಯವಿಲ್ಲ. ಶ್ರೇಷ್ಠ ಭಕ್ತಿಗೆ ಹೆಸರಾದವರನ್ನು ತಮ್ಮ ಜೀವನದಲ್ಲಿ ಮಾದರಿಯಾಗಿಟ್ಟುಕೊಳ್ಳುವುದು ಮುಖ್ಯ ಎಂಬುದನ್ನು ದುಗ್ಗಳೆಯ ಈ ವಚನ ತಿಳಿಸುತ್ತದೆ. ವೇದಶಾಸ್ತ್ರ ಪುರಾಣ ತತ್ವಗಳೆಲ್ಲವನ್ನು ಮಾತ್ರವೇ ಜೀರ್ಣಿಸಿಕೊಂಡು ಜೀವನ ಸಾಗಿಸಬೇಕೆಂದೇನಿಲ್ಲ. ಮೃಡಶರಣರ ಜೀವನವನ್ನು ಕಂಡು ಅವರಂತೆ ಸರಳವಾಗಿ ಬದುಕುವ ರೀತಿಯನ್ನು ಅರ್ಥೈಸಿಕೊಂಡರೆ ಸಾಕೆಂಬುದು ಆಕೆಯ ವಚನದ ಇಂಗಿತ. ಇದೇ ಬಗೆಯಲ್ಲಿ ಅಮುಗೆ ರಾಯಮ್ಮನು ಹಿರಿಯರು ಕಿರಿಯರು ಎನ್ನದೆ ಯಾರು ಶ್ರೇಷ್ಠಭಕ್ತರಾಗಿರುವರೋ, ಶ್ರೇಷ್ಠಅರಿವನ್ನು ಹೊಂದಿರುವ ಪರಿಪೂರ್ಣ ಜ್ಞಾನಿಗಳೋ ಅವರ ಪಾದಗಳಿಗೆ ನಮಸ್ಕರಿಸುತ್ತೇನೆ ಎಂದು ಹೇಳುವ

ವಚನವಿದು.

**"ಅರಿವುಸಂಬಂಧವುಳ್ಳ ಪರಿಪೂರ್ಣಜ್ಞಾನಿಗಳ**
**ಅಡಿಗಳಿಗೆ ನಾನೆರಗುವೆನಯ್ಯಾ...,**
**ಅಮುಗೇಶ್ವರಲಿಂಗವನರಿದ ಘನಮಹಿಮನೆಂಬೆನಯ್ಯಾ."[20]**

ನಿಜ ಭಕ್ತಿಯ ಮೂಲಕವೇ ಶಿವನನ್ನು ಕಾಣಲು ಸಾಧ್ಯ. ಶಿವಶರಣನ ಸೋಗಿನಲ್ಲಿ ಜೀವನ ಕಳೆಯುತ್ತಾ ಡಂಭಾಚಾರದಲ್ಲಿ ಮುಳುಗಿರುವ ಅನಾಚಾರಿ ವಿರಕ್ತರನ್ನು ಅಮುಗೆ ರಾಯಮ್ಮ ಹೀಗಳೆದಿದ್ದಾಳೆ. ಶ್ರೇಷ್ಠ ಭಕ್ತಿ ಆಚಾರದ ಮೂಲಕ ಮಾತ್ರವೇ ಮೋಕ್ಷ ಪಡೆಯಲು ಸಾಧ್ಯ. ಅಮುಗೇಶ್ವರ ಲಿಂಗವನ್ನು ಅರಿಯದೆ ವೇಷಭೂಷಣಗಳ ಮೂಲಕ ತೋರ್ಪಡಿಸುವ ಭಕ್ತಿಯು ಫಲವನ್ನು ನೀಡದ ಮರದಂತೆ ಎಂಬುದನ್ನು ಸೊಗಸಾದ ನಿದರ್ಶನದ ಮೂಲಕ ಹೀಗೆ ಹೇಳಿದ್ದಾರೆ.

**"ಬೀಜವಿಲ್ಲದೆ ವೃಕ್ಷ ಬೆಳೆಯಬಲ್ಲುದೆ?**
**ಹೂವಿಲ್ಲದೆ ಹಣ್ಣಾಗಬಲ್ಲುದೆ?...**
**ಅಮುಗೇಶ್ವರಲಿಂಗವನರಿಯದ**
**ಅನಾಚಾರಿಗಳ ವಿರಕ್ತರೆಂಬೆನೆ? ಎನಲಾಗದು."[21]**

ರಾಟೆಯಿಂದ ಕದಿರು ತೆಗೆದು ನೂಲುವ ಕಾಯಕವನ್ನು ಮಾಡುತ್ತಿದ್ದ ಶರಣೆ, ಕಾಯಕಯೋಗಿನಿ ಕದಿರ ರೆಮ್ಮವ್ವೆಯು ಹಲವಾರು ವಚನಗಳನ್ನು ರಚಿಸಿರಬಹುದು ಎಂದು ವಿದ್ವಾಂಸರು ಊಹಿಸುತ್ತಾರೆ. ಆದರೆ ಆಕೆಯದು ಎನ್ನಲಾಗುವ ನಾಲ್ಕು ವಚನಗಳು ಮಾತ್ರ ದೊರೆತಿವೆ. ಕಾಯಕದ ಮಹತ್ವವನ್ನು ವ್ಯಕ್ತಪಡಿಸುವ ವಚನ ಒಂದಿದೆ. ಅಲೌಕಿಕ ವಿಚಾರಗಳನ್ನು ಅಂತರ್ಗತವಾಗಿಸಿಕೊಂಡು, ಸತಿ-ಪತಿ ದಾಂಪತ್ಯ ಜೀವನವನ್ನು ಕುರಿತ ಎರಡು ವಚನಗಳಿವೆ ಹಾಗೂ ತನ್ನ ಆಧ್ಯಾತ್ಮಿಕ ಭಕ್ತಿಯ ವಿಕಾಸಕ್ಕೆ ಕಾರಣರಾದ ಶ್ರೇಷ್ಠ ಶಿವಶರಣರನ್ನು ಕುರಿತ ಒಂದು ವಚನವನ್ನು ಕಾಣಬಹುದಾಗಿದೆ. ಆ ವಚನ ಹೀಗಿದೆ.

**"ಎನ್ನ ಸ್ಥೂಲ ತನುವೆ ಬಸವಣ್ಣನಯ್ಯಾ,**
**ಎನ್ನ ಸೂಕ್ಷ್ಮತನುವೆ ಚೆನ್ನಬಸವಣ್ಣನಯ್ಯಾ... ಗುಮ್ಮೇಶ್ವರಾ."[22]**

ತನ್ನ ವ್ಯಕ್ತಿತ್ವ ಸೃಷ್ಟಿಗೆ ಕಾರಣಶ್ರೇಷ್ಠರಾದ ಶಿವಶರಣರನ್ನು ನೆನೆದಿರುವುದು ಕಂಡುಬರುತ್ತದೆ. ಅನುಭವ ಮಂಟಪವನ್ನು ಕಟ್ಟಿ ಅಲ್ಲಿ ಸ್ತ್ರೀ ಸಮಾನತೆಗೆ ಅವಕಾಶ ಕಲ್ಪಿಸಿಕೊಟ್ಟ, ಸರ್ವರನ್ನು ಆದರದಿಂದ ಆಮಂತ್ರಿಸಿದ ಬಸವಣ್ಣನು ಈಕೆಗೆ ಶರಣೆಯಾಗಲು ಸದವಕಾಶವನ್ನು ಕಲ್ಪಿಸಿದ್ದಕ್ಕೆ ಆತನನ್ನು 'ತನ್ನ ಸ್ಥೂಲ ತನು'ವೆಂದು ಪರಿಗಣಿಸಿದ್ದಾಳೆ. ರಂ ಶ್ರೀ ಮುಗಳಿ ಅವರು ಹೇಳುವಂತೆ ಬಸವೇಶ್ವರರ ಸೋದರಳಿಯನಾದ ಚನ್ನಬಸವಣ್ಣನು ಅಲ್ಲಮಪ್ರಭುವಿನಿಂದ 'ಮಹಾಜ್ಞಾನಿ' ಎಂದು ಹೊಗಳಿಸಿಕೊಂಡ ಶರಣ. "ಅವನು ಅಲ್ಲಮನಂತೆ ಸಂಘಟನೆಯ ನಿಯತ

ಕ್ರಿಯೆಯನ್ನೊಲ್ಲದ ಜಂಗಮನಲ್ಲ, ಮತಪ್ರಸಾರವನ್ನು ಕೈಗೊಂಡ 'ಕ್ರಿಯಾಜ್ಞಾನಿ'. ಅಂತೆಯೇ ಅವನು ಸ್ಥಲಸಿದ್ಧಾಂತಕ್ಕೆ ಸರಿಯಾದ ತಳಹದಿಯನ್ನು ಹಾಕಿ ಅದರ ಸೃಷ್ಟಿಶಾಸ್ತ್ರ, ಮನಶ್ಶಾಸ್ತ್ರಗಳನ್ನು ವಿಸ್ತಾರವಾಗಿ ವರ್ಣಿಸಿದನು."[23] ತನ್ನ ಮನೋವಿಕಾಸಕ್ಕೆ ಚನ್ನಬಸವಣ್ಣನ ಈ ಬಗೆಯ ಜ್ಞಾನವು ಕಾರಣವಾಗಿ ಇರಬೇಕೆಂದು ರೆಮ್ಮವೆಯು ಆತನನ್ನು 'ತನ್ನ ಸೂಕ್ಷ್ಮ ತನು'ವೆಂದು ಹೇಳಿಕೊಂಡು ಆ ಮೂಲಕ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದಾಳೆ. ಅನುಭವ ಮಂಟಪದ ಅಧ್ಯಕ್ಷ, ಶೂನ್ಯ ಸಿಂಹಾಸನಾಧಿಪತಿಯಾದ ಅಲ್ಲಮಪ್ರಭುವನ್ನು 'ತನ್ನ ಕಾರಣ ತನು'ವೆಂದು ಹೇಳಿಕೊಂಡಿರುವುದರಿಂದ ತನ್ನ ಆತ್ಮದ ಅರಿವಿಗೆ ಕಾರಣ ಪ್ರಭುದೇವರೇ ಆಗಿರುವುದಾಗಿ ತಿಳಿಯುತ್ತದೆ. ತನ್ನ ಸ್ಥೂಲ, ಸೂಕ್ಷ್ಮ, ಕಾರಣ ತನುವಿನ ವಿಕಾಸಕ್ಕೆ ಆತ್ಮೋನ್ನತಿಗೆ ಕಾರಣರಾದ ಬಸವಣ್ಣ ಚೆನ್ನಬಸವಣ್ಣ ಮತ್ತು ಅಲ್ಲಮಪ್ರಭುವನ್ನು ಕೃತಜ್ಞತಾ ಭಾವದಿಂದ ನೆನೆದಿರುವುದು ವ್ಯಕ್ತವಾಗಿದೆ.

ಅಧ್ಯಾತ್ಮಿಕ ನಿಷ್ಠೆ, ಅಧ್ಯಾತ್ಮಿಕ ಚಿಂತನೆ, ಏಕದೇವೋಪಾಸನೆಯನ್ನು ಕುರಿತ ಹಲವಾರು ವಚನಗಳನ್ನು ದಾಸಿಮಯ್ಯ ರಚಿಸಿದ್ದಾನೆ. ಶೈವಮತಾನುಯಾಯಿಯಾಗಿ ಶೈವಮತ ಪ್ರಚಾರಕ್ಕಾಗಿ ಶ್ರಮಿಸಿದ ವಚನಕಾರರಲ್ಲಿ ಜೇಡರ ದಾಸಿಮಯ್ಯ ಮೊದಲಿಗ.

**"ಇಂದಿಂಗೆಂತು ನಾಳಿಂಗೆಂತೆಂದು ಚಿಂತಿಸಲೇಕೆ?**
**ತಂದಿಕ್ಕುವ ಶಿವಂಗೆ ಬಡತನವೆ? ರಾಮನಾಥ."[24]**

ಜೀವನದ ಪ್ರತಿಯೊಂದು ಆಗು-ಹೋಗುಗಳಿಗೆ ಕಾರಣಕರ್ತ ಶಿವನೇ ಆಗಿರುವುದರಿಂದ ಪ್ರತಿನಿತ್ಯದ ಜೀವನ ನಿರ್ವಹಣೆಗಾಗಿ ಯಾರೊಬ್ಬರೂ ಚಿಂತಿಸಬೇಕಾದ ಅಗತ್ಯವಿಲ್ಲ. ಎಲ್ಲವನ್ನು ನೀಡುವ ಶಕ್ತಿ ಶಿವನಿಗಿದೆ. ಆತ ಸದಾಚಾರ ಸನ್ನಡತೆಯ ಸದ್ಭಕ್ತರಿಗೆ ಒಲಿಯುವವನು. ಅಂತಹ ಸದ್ಭಕ್ತರನ್ನು ಆತ ಸದಾ ಕಾಪಾಡುವವನಾಗಿದ್ದಾನೆ. ಹಾಗಾಗಿ ಜೀವನದಲ್ಲಿ ಭರವಸೆಯ ಬೆಳಕಾಗಿರುವ ಶಿವನಲ್ಲಿ ಭಕ್ತಿಯನ್ನು ಹೊಂದಿರುವುದು ಮುಖ್ಯ. ಆತ ಸರ್ವಕಾಲಕ್ಕೂ ನಮ್ಮ ಜೊತೆಯಲ್ಲಿದ್ದು ನಮ್ಮ ಬೇಕು ಬೇಡಗಳನ್ನು ನೋಡಿಕೊಳ್ಳುವವನು. ಹೀಗಿರುವಾಗ ಎಲ್ಲವನ್ನು ನೀಡುವ ಶಿವನಿರುವಾಗ ಚಿಂತಿಸುವ ಅಗತ್ಯವಿಲ್ಲ ಎಂಬುದು ದಾಸಿಮಯ್ಯನ ಮನದ ಇಂಗಿತ.

ದೇವರನ್ನೇ ಪ್ರಶ್ನಿಸುವ ಎದೆಗಾರಿಕೆಯನ್ನು 'ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ' ಎಂಬ ವಚನದಲ್ಲಿ ಕಾಣಬಹುದು ಹಾಗೂ ಸತ್ಸಂಗಕ್ಕೆ ಆದ್ಯತೆ ನೀಡಿದುದರ ಬಗೆಗೆ 'ಕಡೆಗೀಲಿಲ್ಲದ ಬಂಡಿ', 'ಕರಿಯನಿತ್ತಡೆ ಒಲ್ಲೆ' ಎಂಬ ವಚನಗಳನ್ನು ಪ್ರಮುಖವಾಗಿ ಕಾಣಲು ಸಾಧ್ಯ. ಹೀಗೆ ಹಲವಾರು ದೃಷ್ಟಿಕೋನಗಳಿಂದ ವಚನಗಳನ್ನು ರಚಿಸಿರುವ ಅದ್ಭುತ ಪ್ರತಿಭೆಯುಳ್ಳ ಶಿವಶರಣರಾಗಿ ದಾಸಿಮಯ್ಯ ಕಂಡುಬರುತ್ತಾನೆ ಹಾಗೂ ದಾಸಿಮಯ್ಯನ ವಚನಗಳಲ್ಲಿ ಸರಳವಾದ ಭಾಷೆಯನ್ನು,

ಸಂಕ್ಷಿಪ್ತ ಗುಣವನ್ನು, ಅರ್ಥಪ್ರಾಚುರ್ಯತೆಯನ್ನು ಕಾಣಬಹುದು.

ದಾಂಪತ್ಯ ಜೀವನಕ್ಕೆ ಸಂಬಂಧಿಸಿದ ವಚನಗಳನ್ನು ಗಮನಿಸುವುದಾದರೆ, ಅಂದಿನ ಸಮಾಜದಲ್ಲಿ ಪತಿ ಶ್ರೇಷ್ಠ, ಸತಿ ಕನಿಷ್ಠ, ದಾಸಿ ಎಂಬಂತಹ ಭಾವನೆಗಳು ಹೆಚ್ಚಾಗಿದ್ದವು. ಆದರೆ ರೆಮ್ಮವ್ವೆಯು ಅದನ್ನು ತಿರಸ್ಕರಿಸಿ 'ತಾನೇ ಮೇಲು ಗಂಡ ಕೀಳು (ಕೆಳಗೆ)'ಎಂಬ ದಿಟ್ಟತನವನ್ನು ತೋರಿರುವ ಬಗೆ ವಿಶಿಷ್ಟ. ಆಕೆಯೂ ಅಕ್ಕಮಹಾದೇವಿಯಂತೆ ಶಿವನನ್ನೇ ತನ್ನ ಗಂಡನೆಂದು ಭಾವಿಸಿದವಳು. ಲೋಕದ ಗಂಡಂದಿರಿಗೆ ಎಲ್ಲ ಹೆಂಡತಿಯರು ಅಧೀನರಾಗಿರುವರು ಅವರಿಂದ ಬಸಿರಾಗುವರು ಆ ಗಂಡಂದಿರಲ್ಲಿ ಸಂತಾನೋತ್ಪತ್ತಿ ಮಾಡುವ ಶಕ್ತಿ ಇದೆ, ಬೀಜ ಬಿತ್ತುವ ಶಕ್ತಿ ಇದೆ ಆದರೆ ಆಕೆ ತನ್ನ ಗಂಡನಿಗೆ ಆ ಬಗೆಯ ಬೀಜ ಬಿತ್ತುವ ಅಗತ್ಯವಿಲ್ಲ. ಎಲ್ಲ ಗಂಡಂದಿರು ಹೆಂಡತಿಯ ಮೇಲೆ ಅಧಿಕಾರ ಸ್ಥಾಪಿಸಿದರೆ ತನ್ನ ಗಂಡ ತನ್ನನ್ನು ಅಧಿಕಾರಯುಕ್ತಳಾಗಿ ಮಾಡಿ ತನ್ನನ್ನು ಗೌರವಿಸುತ್ತಾನೆ, ಜಗದಲ್ಲಿ ಹೆಂಡತಿಯನ್ನು ಗೌರವಿಸುವ ಗಂಡನೇ ಶ್ರೇಷ್ಠ ಎಂದು ರೆಮ್ಮವ್ವೆ ಹೇಳುತ್ತಾಳೆ. ಆ ವಚನ ಹೀಗಿದೆ.

**"ಎಲ್ಲರ ಹೆಂಡಿರು ತೊಳಸಿಕ್ಕುವರು;**
**ಎನ್ನ ಗಂಡಂಗೆ ತೊಳಸುವುದಿಲ್ಲ...**
**ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ."**[25]

**ಸಮಾರೋಪ:**

ಹೀಗೆ ನೇಯ್ಗೆ ಕಾಯಕದಲ್ಲಿ ನಿರತರಾಗಿದ್ದು ತಮ್ಮ ಕಾಯಕದ ಅನುಭವದ ಜೊತೆಗೆ ಇತರ ಶಿವಶರಣರ ಸಂಗದೊಂದಿಗೆ ದೊರೆತ ಅಮೂಲ್ಯವಾದ ಆತ್ಮಾನುಭೂತಿಯನ್ನು ವಚನವೆಂಬ ಎರಕದಲ್ಲಿ ಹೊಯ್ದು ಸಮಾಜದ ಉದ್ಧಾರಕ್ಕಾಗಿ ತಮ್ಮದೇ ಆದ ಶಿಲ್ಪಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಕ್ರಿಯೆಯನ್ನು ಮರೆತ ಅರಿವು, ಅರಿವನ್ನು ಮರೆತ ಕ್ರಿಯೆ ಎರಡೂ ಹೀನವಾದುದು ಎಂಬುದು ಇವರು ಸಮಾಜಕ್ಕೆ ನೀಡಿದ ಸಂದೇಶವಾಗಿದೆ. ನೈತಿಕ ಜೀವನಮಾರ್ಗ, ಪರೋಪಕಾರ ಮನಃಸ್ಥಿತಿ, ಸಮರ್ಪಣಾಭಾವ, ಶರಣಸತಿ–ಲಿಂಗಪತಿ ಭಾವಗಳು ಇವರ ವಚನಗಳಲ್ಲಿ ಎದ್ದು ಕಾಣುತ್ತವೆ. ಅರಿವನ್ನು ಮೂಡಿಸುವ, ಪಕ್ವತೆಯನ್ನು ಬೋಧಿಸುವ ಇವರ ವಚನಗಳು ಸಾರ್ವಕಾಲಿಕ ಮತ್ತು ಸಾರ್ವದೇಶಿಕವಾದವು.

**ಕೊನೆ ಟಿಪ್ಪಣಿಗಳು:**

1. ಶಿವಪ್ಪ ಕೆ.ಸಿ., (2017), ವಚನದರ್ಶನ, ಅಭಿನವ ಪ್ರಕಾಶನ, ಬೆಂಗಳೂರು, ಪು.ಸಂ. 312
2. ಅದೇ, ಪು.ಸಂ. 312
3. ವಿಠ್ಠಪ್ಪ ಗೋರಂಟ್ಲಿ, (2019), ಮೊದಲ ವಚನಕಾರ ದೇವರ ದಾಸಿಮಯ್ಯನ ವಚನಗಳ ಪ್ರಸ್ತುತತೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. 11
4. ವಿದ್ಯಾಶಂಕರ ಎಸ್. (ಸಂ), (1993), ಸಂಕೀರ್ಣ ವಚನ ಸಂಪುಟ–2, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 861, ಪು.ಸಂ. 263
5. ವಿದ್ಯಾಶಂಕರ ಎಸ್. (ಸಂ), (1993), ಸಂಕೀರ್ಣ ವಚನ ಸಂಪುಟ–2, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 821, ಪು.ಸಂ. 254
6. ವಿದ್ಯಾಶಂಕರ ಎಸ್. (ಸಂ), (1993), ಸಂಕೀರ್ಣ ವಚನ ಸಂಪುಟ–2, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 738, ಪು.ಸಂ. 236
7. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ–5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 747, ಪು.ಸಂ. 232
8. ಕಲಬುರ್ಗಿ ಎಂ.ಎಂ. (ಸಂ), (1993), ಸಂಕಿರ್ಣ ವಚನ ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 931, ಪು.ಸಂ. 282
9. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ–5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 602, ಪು.ಸಂ. 190
10. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ–5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 673, ಪು.ಸಂ. 209
11. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ–5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 704, ಪು.ಸಂ. 217
12. ವಿದ್ಯಾಶಂಕರ ಎಸ್. (ಸಂ), (1993), ಸಂಕೀರ್ಣ ವಚನ ಸಂಪುಟ–2, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 743, ಪು.ಸಂ. 237
13. ಕಲಬುರ್ಗಿ ಎಂ.ಎಂ. (ಸಂ), (1993), ಸಂಕಿರ್ಣ ವಚನ ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 325, ಪು.ಸಂ. 108
14. ವಿದ್ಯಾಶಂಕರ ಎಸ್. (ಸಂ), (1993), ಸಂಕೀರ್ಣ ವಚನ ಸಂಪುಟ–2, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 777, ಪು.ಸಂ. 244
15. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ–5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 743, ಪು.ಸಂ. 230
16. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ–5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 45.
17. ಕಲಬುರ್ಗಿ ಎಂ.ಎಂ. (ಸಂ), (1993), ಸಂಕಿರ್ಣ ವಚನ ಸಂಪುಟ–1, ಕನ್ನಡ ಪುಸ್ತಕ

ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 345, ಪು.ಸಂ. 114
18. ಕಲಬುರ್ಗಿ ಎಂ.ಎಂ. (ಸಂ), (1993), ಸಂಕೀರ್ಣ ವಚನ ಸಂಪುಟ-1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 766, ಪು.ಸಂ. 230
19. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ-5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 786, ಪು.ಸಂ. 251
20. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ-5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 599, ಪು.ಸಂ. 189
21. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ-5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 668, ಪು.ಸಂ. 208
22. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ-5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 744, ಪು.ಸಂ. 231
23. ಮುಗಳಿ ರಂ.ಶ್ರೀ., (2022), ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು, ಪು. ಸಂ. 154
24. ವಿದ್ಯಾಶಂಕರ ಎಸ್. (ಸಂ), (1993), ಸಂಕೀರ್ಣ ವಚನ ಸಂಪುಟ-2, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 731, ಪು.ಸಂ. 234
25. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ-5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ವಚನ ಸಂಖ್ಯೆ 746, ಪು.ಸಂ. 231

## ಆಕರ ಗ್ರಂಥಗಳು:


1. ಕಲಬುರ್ಗಿ ಎಂ.ಎಂ. (ಸಂ), (1993), ಸಂಕೀರ್ಣ ವಚನ ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ವಿದ್ಯಾಶಂಕರ ಎಸ್. (ಸಂ), (1993), ಸಂಕೀರ್ಣ ವಚನ ಸಂಪುಟ–2, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ವೀರಣ್ಣ ರಾಜೂರ (ಸಂ), (1993), ಶಿವಶರಣೆಯರ ವಚನ ಸಂಪುಟ–5, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.


## ಪರಾಮರ್ಶನ ಗ್ರಂಥಗಳು:


1. ಜತ್ತಿ ಬಿ.ಡಿ. (ಸಂ), (1989), ಬಸವೇಶ್ವರರ ಸಮಕಾಲೀನರು, ಬಸವ ಸಮಿತಿ, ಹುಬ್ಬಳ್ಳಿ.
2. ವಿಠ್ಠಪ್ಪ ಗೋರಂಟ್ಲಿ, (2019), ಮೊದಲ ವಚನಕಾರ ದೇವರ ದಾಸಿಮಯ್ಯನ ವಚನಗಳ ಪ್ರಸ್ತುತತೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಶಿವಪ್ಪ ಕೆ.ಸಿ., (2017), ವಚನದರ್ಶನ, ಅಭಿನವ ಪ್ರಕಾಶನ, ಬೆಂಗಳೂರು.
4. ಮುಗಳಿ ರಂ.ಶ್ರೀ., (2022), ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.